ಪತ್ರಿಕೆಯ ಹೆಸರು : ಸಂಯುಕ್ತ ಕರ್ನಾಟಕ
NAME OF THE NEWS PAPER :
ದಿನಾಂಕ :
DATE : 16/2/23

## ಎಂಟು ಬಾರಿ ಜಯ, 45 ಬಜೆಟ್‌ಗೆ ಸಾಕ್ಷಿ

# ವಿಧಾನಮಂಡಲ ವಿಶ್ವದಾಖಲೆ ವೀರ ಬಸವರಾಜ ಹೊರಟ್ಟಿ

**ಬೆಂಗಳೂರು:** ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ವಿಶ್ವದಾಖಲೆಯ ಜನಪ್ರತಿನಿಧಿ ಇದ್ದಾರೆ. ಸತತ 8 ಬಾರಿ ಗೆದ್ದು, ಹದಿನೇಳು ಮುಖ್ಯಮಂತ್ರಿಗಳನ್ನು ನೋಡಿ, 45 ಬಜೆಟ್‌ಗಳಿಗೆ (ಇದೂ ದಾಖಲೆ) ಸಾಕ್ಷಿಭಾವವಾದವರಿದ್ದಾರೆ. ಅತೀ ಕಡಿಮೆ ಸಮಯದಲ್ಲಿ ಬಜೆಟ್ ಅನುಮೋದಿಸಿ ಕೊಡುವ ಸವಾಲು ಹೊಂದಿದವರಿದ್ದಾರೆ. ಅವರೇ ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ.

2023ರದ್ದು ಹಿಂದಿನ ಬಜೆಟ್‌ನಂತಲ್ಲ. ಲೆಕ್ಕಪತ್ರಗಳ ಮುಖ ಬೇರೆ. ಆದರೆ ನಿರ್ವಹಣೆಯ ವಿಷಯಕ್ಕೆ ಬಂದಾಗ, ಈ ಬಾರಿ ಹಿಂದೆಂದಿಗಿಂತ ಮಹತ್ವವನ್ನು ಮುಂಗಡಪತ್ರ ಅಧಿವೇಶನ ಪಡೆದುಕೊಂಡಿದೆ. ಏಕೆಂದರೆ ಇದು ಚುನಾವಣಾ ಹೊಸ್ತಿಲಿನ ಅಧಿವೇಶನ.



ಕರ್ನಾಟಕದ ಸಂಸದೀಯ ವ್ಯವಸ್ಥೆಯಲ್ಲಿ ವಿಧಾನಸಭೆಯಲ್ಲಿ ಅನುಮೋದಿತವಾದ ನಂತರ, ಮೇಲ್ಮನೆಯಲ್ಲೂ ಬಜೆಟ್ ಅನುಮೋದನೆಗೊಂಡರೆ ಮಾತ್ರ ಏಪ್ರಿಲ್ ತಿಂಗಳಿಂದ ಸಂಬಳ-ಸಾರಿಗೆ ಎಲ್ಲ. ಇಲ್ಲವಾದರೆ ಏನೂ ಇಲ್ಲ ! ಬಜೆಟ್ ಒಮ್ಮೆಯೂ ಮೇಲ್ಮನೆಯಲ್ಲಿ ತಿರಸ್ಕೃತವಾಗಿ ಪುನಃ ಕೆಳಮನೆಯ ಪರಿಶೀಲನೆಗೆ ಬಂದಿಲ್ಲ ಎಂಬುದು ಐತಿಹಾಸಿಕ ಸತ್ಯವಾದರೂ ಕಾನೂನುಬದ್ಧವಾಗಿ ಮೇಲ್ಮನೆಗೆ ಇನ್ನಿಲ್ಲದ ಬಿಗಿ ಇದ್ದೇ ಇದೆ.

ಆದ್ದರಿಂದಲೇ ಬಜೆಟ್ ಕುರಿತು ಎಷ್ಟು ಗಹನವಾದ ಚರ್ಚೆಗಳು ಕೆಳಮನೆಯಲ್ಲಿ ಆಗುತ್ತವೋ, ಅದಕ್ಕೂ ಮಿಗಿಲಾದ ಸಂವಾದ ವಿಧಾನ ಪರಿಷತ್ತಿನಲ್ಲಿ ನಡೆಯುತ್ತದೆ. ಎಷ್ಟೋ ಬಾರಿ ಕೆಳಮನೆಯ ಸದಸ್ಯರ ಸಲಹೆಗಳನ್ನು ಪರಿಶೀಲಿಸುವ ಮಾತು ಮಾತ್ರ ಕೇಳಿ ಬಂದಿದ್ದಿದೆ. ಆದರೆ ಮೇಲ್ಮನೆಯಲ್ಲಿ ಮಾಡಲಾದ ಸಲಹೆಗಳನ್ನು ಅಳವಡಿಕೆ ಮಾಡಿಕೊಂಡ ನಂತರವೇ ಬಜೆಟ್ ಅನುಮೋದಿತವಾಗುತ್ತದೆ.

ವಿಷಯ ಹೀಗಿರುವಾಗ ಬಸವರಾಜ ಹೊರಟ್ಟಿ ಸ್ಪೀಕರ್ ಆಗಿ ಎರಡನೇ ಬಜೆಟ್ ಅಧಿವೇಶನ ನಡೆಸುತ್ತಿದ್ದಾರೆ. ನಾಲ್ಕು ದಶಕಗಳಿಂದ ಸದನದಲ್ಲಿ ಬಜೆಟ್‌ಗೆ ಸಾಕ್ಷಿಯಾಗುತ್ತಲೇ ಇರುವ ಹೊರಟ್ಟಿ, 2022ರಲ್ಲಿ ಸ್ಪೀಕರ್ ಆಗಿದ್ದಾಗ ಅತೀ ದೊಡ್ಡ ಗಾತ್ರದ 2.65 ಲಕ್ಷ ಕೋಟಿ ರೂಪಾಯಿ ಬಜೆಟ್‌ಗೆ (ಅದುವರೆಗಿನ ದಾಖಲೆ) ಅನುಮೋದನೆ ದೊರಕಿತ್ತು.

ಕಳೆದ ಬಾರಿ ಹೊರಟ್ಟಿಯವರಿಗೆ ಒಂದು ಇಡೀ ತಿಂಗಳು ಸದನ ನಿರ್ವಹಣೆಯ ಅವಕಾಶ ಸಿಕ್ಕಿತ್ತು. ಈ ಬಾರಿ ಅತೀ ಕಡಿಮೆ ಅವಧಿ ದೊರೆಯುವ ಸಂಭವವಿದೆ. ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡನೆ ಮಾಡಲಿರುವುದರಿಂದ ಅಲ್ಪ ಸಮಯದಲ್ಲಿ ಬಜೆಟ್‌ಗೆ ಮುದ್ರೆಯೊತ್ತಿ ಕೊಡುವುದು ಸವಾಲಿನ ಹೊಣೆಯಾಗಿದೆ. ವಿರೋಧ ಪಕ್ಷದ ನಾಯಕರಿಗೆ ಬಜೆಟ್ ಭಾಷಣದ ಮೇಲೆ ಮಾತನಾಡುವ ಸಮಯ ಮಿತಿ ಇರುವುದಿಲ್ಲ. ಉಳಿದವರಿಗೆ ವೇಳೆಯನ್ನು ನಿಗದಿ ಮಾಡಲಾಗುತ್ತದೆ. ಕೊನೆಯ ದಿನ ಸರ್ಕಾರ ಉತ್ತರ ಕೊಟ್ಟು ಬಜೆಟ್ ಅಂಗೀಕಾರ ಪಡೆಯಬೇಕಾಗಿದೆ. ಇವೆಲ್ಲ ಪ್ರಕ್ರಿಯೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು ಹರಸಾಹಸದ ಕೆಲಸ. ಕಾಲಾವಕಾಶದ ತಾಂತ್ರಿಕ ಸವಾಲನ್ನು ಹೊರಟ್ಟಿ ಗೆಲ್ಲುವುದು ಖಚಿತ ಎಂಬುದು ಸಮೀಪದಿಂದ ಬಲ್ಲವರೆಲ್ಲರ ಖಚಿತ ವಿಶ್ವಾಸ.

ಒಬ್ಬ ರಾಜಕೀಯ ನಾಯಕ ತನ್ನ ಜೀವನದ ಅರ್ಧಕ್ಕೂ ಹೆಚ್ಚೂ ಭಾಗ ಶಾಸನ ಸಭೆಯ ಅವಿಭಾಜ್ಯ ಅಂಗವಾಗುವುದು ಹೇಗೆ ಅತ್ಯಪರೂಪವೋ, ಇಡೀ ವಿಧಾನಸೌಧದ ಎಲ್ಲ ಆಗುಹೋಗುಗಳೊಂದಿಗೆ ಮಿಳಿತಗೊಂಡಿರುವುದೂ ಅಷ್ಟೇ ಅಪರೂಪ. ಸಭಾಪತಿ ಬಸವರಾಜ ಹೊರಟ್ಟಿಯವರ ಮಟ್ಟಿಗೆ ಇವೆರಡೂ ಸಂಭವಿಸಿವೆ. ಹೀಗಾಗಿ ಪ್ರಸಕ್ತ ಅಧಿವೇಶನದ ಹೊರಟ್ಟಿ ನಡೆ ಸಂಸದೀಯ ನಡಾವಳಿಗಳ ದಾಖಲೆಯ ಪುಟಕ್ಕೆ ಸೇರಲಿದೆ. ಸ್ಪೀಕರ್ ಬಸವರಾಜ ಹೊರಟ್ಟಿ ಅವರತ್ತ ರಾಜ್ಯ ಕಣ್ಣಾಗಿರುವುದಕ್ಕೆ ಸಕಾರಣಗಳಿವೆ.

ಪತ್ರಿಕೆಯ ಹೆಸರು :
NAME OF THE NEWSPAPER : ವಿಜಯವಾಣಿ ನ್ಯೂಸ್

ದಿನಾಂಕ :
DATE : 16/2/23

# ಸಚಿವರ ವಿರುದ್ಧ ಸಭಾಪತಿ ಗರಂ

**ವಿಧಾನಪರಿಷತ್ತು:** ಪ್ರಶ್ನೋತ್ತರ ಕಲಾಪ ಆರಂಭವಾಗುತ್ತಿದ್ದಂತೆ ಮೊದಲ ಎರಡು ಪ್ರಶ್ನೆಗಳಿಗೆ ಉತ್ತರ ನೀಡಲು ಪಶು ಸಂಗೋಪನೆ ಸಚಿವ ಪ್ರಭು ಚೌಹಾಣ್ ಕಾಲಾವಕಾಶ ಕೋರಿದ್ದರಿಂದ ಸಭಾಪತಿ ಬಸವರಾಜ ಹೊರಟ್ಟಿ ಗರಂ ಆದರು.

ಮೊದಲ ಪ್ರಶ್ನೆ ಕಾಂಗ್ರೆಸ್ ಸದಸ್ಯ ಕೆ. ಹರೀಶ್ ಕುಮಾರ್ ಅವರದ್ದಾಗಿತ್ತು. ಕರ್ನಾಟಕದ ಪ್ರತಿ ಜಿಲ್ಲೆಯಿಂದ ಗೋವಾಕ್ಕೆ ಪ್ರತಿ ದಿನ ರಫ್ತು ಮಾಡಲಾಗುವ ದನ ಮತ್ತು ಎಮ್ಮೆ ಮಾಂಸದ ಪ್ರಮಾಣವೆಷ್ಟು, ಜಿಲ್ಲಾವಾರು ವರದಿ ನೀಡುವುದು ಎಂದು ಕೇಳಿದ್ದರು. ಇದಕ್ಕೆ ಉತ್ತರಿಸಲು ಸಮಯ ಕೇಳಿದರು.

ಎರಡನೇ ಪ್ರಶ್ನೆ ಜೆಡಿಎಸ್ ಸದಸ್ಯ ತಿಪ್ಪೇಸ್ವಾಮಿ ಅವರದ್ದಾಗಿತ್ತು. ರಾಜ್ಯದಲ್ಲಿ ನಡೆಯುವ ಜಾನುವಾರು ಸಂತೆ ಮತ್ತು ಜಾತ್ರೆಗಳೆಷ್ಟು? ಕಳೆದ ಮೂರು ವರ್ಷಗಳಿಂದ ರಾಸುಗಳಿಗೆ ತಗುಲಿದ ಚರ್ಮಗಂಟು ರೋಗದ ಪರಿಣಾಮವೇನು? ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ. ರೈತನಿಗೆ ಯಾವ ರೀತಿ ಸಹಾಯ ಮಾಡಲಾಗಿದೆ ಎಂದು ಪ್ರಶ್ನಿಸಿದ್ದರು. ಇದಕ್ಕೂ ಸಚಿವರು ಕಾಲಾವಕಾಶ ಕೇಳಿದ್ದರು.

ಇದರಿಂದ ತಿಪ್ಪೇಸ್ವಾಮಿ ಕೆರಳಿದರು. ನಾನು ಕೇಳಿರುವುದು ಸಣ್ಣ ಪ್ರಶ್ನೆ ಅದಕ್ಕೂ ಉತ್ತರವಿಲ್ಲವೆಂದರೆ ಹೇಗೆ? ಎಂದರು. ಅವರಿಗೆ ಬೆಂಬಲವಾಗಿ ಜೆಡಿಎಸ್ ನಾಯಕ ಭೋಜೇಗೌಡ ಅವರು ಮಾತನಾಡಿ, ಈಗ ಎಲ್ಲವೂ ಬೆರಳ ತುದಿಯಲ್ಲೇ ಮಾಹಿತಿ ಸಿಗುತ್ತದೆ. ನಿಮ್ಮ ಅಧಿಕಾರಿಗಳಿಗೆ ಹೇಳಿ ತರಿಸಿ ಎಂದರು.

ಇದಕ್ಕೆ ಸಚಿವ ಪ್ರಭು ಚೌಹಾಣ್ ಉತ್ತರಿಸಿ ಅವರು ತಾಲೂಕುವಾರು ಕೇಳಿದ್ದಾರೆ. ಕೆಲ ಮಾಹಿತಿಗಳನ್ನು ಕಂದಾಯ ಇಲಾಖೆಯಿಂದ ಪಡೆದು ಉತ್ತರಿಸಬೇಕಿದೆ. ಅದಕ್ಕಾಗಿ ಕಾಲಾವಕಾಶ ಬೇಕು ಎಂದು ಹೇಳಿದರು.

ಇದಕ್ಕೆ ವಿಪಕ್ಷ ಸದಸ್ಯರ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಅಧಿಕಾರಿಗಳು ಏನು ಮಾಡ್ತಿದ್ದಾರೆ. ನಾವು 10 ದಿನ ಮುಂಚಿತವಾಗಿಯೇ ಪ್ರಶ್ನೆ ಕೇಳಿದ್ದೇವೆ. ಈಗ ಬೇರೆ ಇಲಾಖೆಯಿಂದ ಮಾಹಿತಿ ಬೇಕು ಎಂದು ಸಬೂಬು ಹೇಳುತ್ತಿದ್ದಾರೆ. ಸಚಿವರು ಬೇಜವಾಬ್ದಾರಿ ಉತ್ತರ ಕೊಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದರಿಂದ ಮುಜುಗರ ಗೊಂಡ ಸಚಿವ ಪ್ರಭು ಚವ್ಹಾಣ್, ಜೋರು ದನಿಯಲ್ಲಿ ಮಾತನಾಡಲಾರಂಭಿಸಿದರು.

ಜೆಡಿಎಸ್ ಎಲ್.ಎಸ್.ಭೋಜೆಗೌಡ, ನಿಮಗೆ ಕನ್ನಡ ಸರಿಯಾಗಿ ಬರೋದಿಲ್ಲ ಸುಮ್ಮನೆ ಏನೇನೊ ಮಾತಾಡ್ತೀರಾ. ಮೊದಲು ಕನ್ನಡ ಕಲಿಯಿರಿ ಎಂದು ತಿರುಗೇಟು ನೀಡಿದರು. ಇದರಿಂದ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು

ಈ ವೇಳೆ ಮಧ್ಯ ಪ್ರವೇಶಿಸಿದ ಸಭಾಪತಿಯವರು, ಸದನಕ್ಕೆ ಉತ್ತರ ನೀಡುವುದು ಸಚಿವರ ಜವಾಬ್ದಾರಿ ಎಂದರು. ಇದಕ್ಕೆ ಸಚಿವರು, 21 ಜಿಲ್ಲೆಗಳಿಂದ ಉತ್ತರ ಪಡೆಯಬೇಕು. ಅಧಿಕಾರಿಗಳಿಗೆ ಸೂಚಿಸಲಾಗಿದೆ. 15 ದಿನ ಸಮಯಾವಕಾಶ ಕೊಡಿ ಎಂದಾಗ ಸಿಟ್ಟಾದ ಸಭಾಪತಿ ಅವರು, 15 ದಿನ ಸದನ ನಡೆಯುತ್ತಾ. ಸದನ ನಡೆಯುವುದರೊಳಗೆ ಉತ್ತರ ಕೊಡಬೇಕು. ಇಲ್ಲವಾದಲ್ಲಿ ನಾನು ನನ್ನ ನಿಲುವನ್ನು ತಿಳಿಸಬೇಕಾಗುತ್ತೆ ನೋಡಿ ಎಂದು ಗರಂ ಆದರು.

ಈ ಸಂದರ್ಭದಲ್ಲಿ ಸಭಾನಾಯಕರ ಪರವಾಗಿ ವಸತಿ ಸಚಿವ ವಿ.ಸೋಮಣ್ಣ ಉತ್ತರಿಸಿ, ಸದಸ್ಯರ ಪ್ರಶ್ನೆಗೆ ಉತ್ತರಿಸುವುದು ಸಚಿವರ ಕರ್ತವ್ಯ. ಇನ್ನೆರಡು ದಿನದಲ್ಲಿ ಉತ್ತರ ಕೊಡಿಸುವ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು. ಮುಂದಿನ ವಾರ ಉತ್ತರ ಕೊಡಿ ಎಂದು ಸಭಾಪತಿ ಸೂಚನೆ ನೀಡುವ ಮೂಲಕ ವಿಷಯವನ್ನು ತಿಳಿಗೊಳಿಸಿ ಮುಂದಿನ ಪ್ರಶ್ನೆಗೆ ಹೋದರು.